ಶ್ರೀ ಡಿ. ದೇವರಾಜ ಅರಸ್.— ಫಾರಿನ್ ಕೊಲ್ಯಾಬರೇಷನ್ ಮಾಡುವುದಾಗಲೀ ಬೇರೆ ದೇಶದ ಬ್ಯಾಂಕಿನಿಂದ ಹಣ ತರುವುದಾಗಲೀ ರಾಜ್ಯ ಸರ್ಕಾರ ಒಂಟಿಯಾಗಿ ಮಾಡುವುದಕ್ಕಾಗುವುದಿಲ್ಲ. ಕೇಂದ್ರದ ಮುಖಾಂತರವೇ ಮಾಡಬೇಕು. ಆದುದರಿಂದ, ಮಾನ್ಯ ಸದಸ್ಯರ ಪ್ರಶ್ನೆಗೆ ಏನೆಂದು ಉತ್ತರ ಹೇಳಲಿ? ಆದುಂ ಕೇಂದ್ರಕ್ಕೆ ಬಿಟ್ಟಿದ್ದು.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಸದಸ್ಯರನ್ನು ತಾವು ಕೈಗಾರಿಕಾ ಮಂತ್ರಿಗಳನ್ನಾಗಿ ಮಾಡಿ; ಅವರು ಈ ಯೋಜನೆಯನ್ನು ಬೇಗ ಕಾರ್ಯರೂಪಗೊಳಿಸುತ್ತಾರೆ.

ಶ್ರೀ ಡಿ. ದೇವರಾಜ ಅರಸ್.— ಅವರಿಗಿಂತಲೂ ನಿಮ್ಮ ಕೈಗೆ ಬಂದರೆ ನೀವು ಚೆನ್ನಾಗಿ ಮಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ನಾಯಿಡೂ ಅವರಿಗೂ ಒಂದಾರು ತಿಂಗಳು ಅವಕಾಶ ಕೊಡಿ.

ಶ್ರೀ ಡಿ. ದೇವರಾಜ ಅರಸ್.— ಸರಿ. ತಮ್ಮ ಶಿಫಾರಸನ್ನು ಗಮನಿಸೋಣ

Construction of Hospital building at Dandinashivara, Turuvekere Taluk.

167. SRI B. BYRAPPAJI (Turuvekere).— Will the Minister for Health be pleased to state.—

(*a*) whether it is a fact that the people of Dandinashivara have, by public contribution, constructed and donated a hospital building for the Government hospital;

(*b*) if so, the year in which the building was constructed and was handed over;

(*c*) whether the Government has taken the possession of the building;

(*d*) if not, the reasons therefor;

(*e*) whether it has come to the notice of the Government that the building is dilapidated due to non-repairs, annualy to the said building;

(*f*) if so, whether the Public Works Department would takeover the building and immediately arrange for annual repairs?

SRI H. M. CHANNABASAPPA (Minister for Health).—

(*a*) Yes.

(*b*) The building was construct d on 25th May 1957.

(*c*) No.

(*d*) Registered Gift deed of Panchayat has been received by the Director of Health and Family Planning on 13rd March 1977. This Gift deed document is under the consideration of the Government at present.

(*e*) Yes.

(*f*) After the building is taken possession of by the Government this will be attended to.

ಶ್ರೀ ಬಿ. ಬೈರಪ್ಪಾಜಿ.— ಮಾನ್ಯ ಅಧ್ಯಕ್ಷರೇ, ದಂಡಿನ ಶಿವರಾ ಗ್ರಾಮದವರು ಸಾರ್ವಜನಿಕವಾಗಿ ವಂತಿಗೆ ವಸೂಲಿ ಮಾಡಿ ಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಮೇಲ್ಪಟ್ಟು ಖರ್ಚು ಮಾಡಿ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಇಪ್ಪತ್ತು ವರ್ಷಗಳಾದರೂ ಅದನ್ನು ಸರ್ಕಾರವು ಇನ್ನೂ ವಶಪಡಿಸಿಕೊಳ್ಳದೆ ದುರಸ್ತಿಯನ್ನೂ ಮಾಡಿಸದಿರುವುದು ಏತಕ್ಕೆ ಮತ್ತು ಇದು ಯಾರ ತಪ್ಪು ಎಂದು ಮಾನ್ಯ ಮಂತ್ರಿಗಳು ತಿಳಿಸುವರೆ ?

† ಶ್ರೀ ಎಚ್.ಎಂ. ಚನ್ನಬಸಪ್ಪ.— ಇದು ಸರ್ಕಾರದ ತಪ್ಪಲ್ಲ.

ಶ್ರೀ ಬಿ. ಬೈರಪ್ಪಾಜಿ.— ತಪ್ಪಿಲ್ಲ ಎಂದರೆ ಇನ್ನು ಯಾರದು ತಪ್ಪು ?

ಶ್ರೀ ಎಚ್.ಎಂ. ಚನ್ನಬಸಪ್ಪ.— ಪಂಚಾಯಿತಿ ಚೇರ್‌ಮನ್ ಅವರದ್ದು ತಪ್ಪು.

ಶ್ರೀ ಬಿ. ಬೈರಪ್ಪಾಜಿ.— ಈ ಕಟ್ಟಡವನ್ನು ಸರ್ಕಾರಕ್ಕೆ ತೆಗೆದುಕೊಂಡು ವಾರ್ಷಿಕ ದುರಸ್ತಿ ಮಾಡಿಸಬೇಕೆಂದು ಅನೇಕ ಸಲ ಆಲ್ಲಿಯ ಚೇರ್‌ಮನ್ ಅವರು ಮತ್ತು ಆಲ್ಲಿಯ ಸಾರ್ವಜನಿಕ ಮುಖಂಡರೆಲ್ಲರೂ ಮಾನವಿ ಮಾಡಿಕೊಂಡಿದ್ದರೂ ಸಹ ಸರ್ಕಾರದವರು ತೆಗೆದುಕೊಳ್ಳಲಿಲ್ಲ. ಆದಕಾರಣ ಪಂಚಾಯಿತಿ ಚೇರ್‌ಮನ್ ಅವರದ್ದು ತಪ್ಪು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ

ಶ್ರೀ ಎಚ್.ಎಂ. ಚನ್ನಬಸಪ್ಪ.— ಮೊದಲೇ ಅವರು ದಾನಪತ್ರವನ್ನು ಬರೆದುಕೊಡಲಿಲ್ಲ. ತಾ: ೨೩ನೇ ಮಾರ್ಚ್ ೧೯೭೭ರಂದು ಅವರು ಬರೆದುಕೊಟ್ಟ ದಾನ ಪತ್ರ ಸರ್ಕಾರಕ್ಕೆ ಬಂದಿದೆ. ಅದನ್ನು ಅಂಗೀಕಾರ ಮಾಡಿಕೊಂಡು ರಿಪೇರಿ ಮಾಡಿಸಿಕೊಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.— ಈಗ ಆ ಕಟ್ಟಡ ಶಿಥಿಲವಾಗಿದೆ. ಆದಕಾರಣ ಕೂಡಲೇ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ರಿಪೇರಿ ಮಾಡಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.— ಗಿಫ್ಟ್ ಡೀಡ್ ಡಾಕ್ಯುಮೆಂಟ್ ನವ್ಮ ಡೈರಕ್ಟರ್ ಅವರಿಗೆ ತಾ: ೨೩ನೇ ಮಾರ್ಚ್ ೧೯೭೭ರಲ್ಲಿ ಬಂದಿದೆ. ಇನ್ನು ಒಂದೆರಡು ವಾರಗಳಲ್ಲಿ ಅದಕ್ಕೆ ಸರ್ಕಾರ ಮಂಜೂರಾತಿ ಕೊಟ್ಟು ಕೆಲಸ ಮಾಡಿಸುತ್ತೇವೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

Repair of Road from Tumkur to Bukkapatna

114. SRI T. TAREGOWDA (Kallembella).—Will the Minister for Public Works be pleasod to state:—

(*a*) whether the Government is aware that the state fund road from Tumkur to Bukkapatna *via* Chelur, Hosakere, Hagalwadi is in bad condition and the heavy bus traffic, both Private and R. T. C. is causing danger to the travelling public ;

(*b*) whether the Executive Engineer, Tumkur has prepared the estimates f r the repair of this portion of this road by asphalting and has forwarded it to the Superintending Engineer, Bangalore with his recommendation ;